೨೦ ಅಂಶದ ಕಾರ್ಯಕ್ರಮ ಸಾಧನೆ

೫೫೩. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ೨೦ ಅಂಶಗಳ ಕಾರ್ಯಕ್ರಮ ನೇರವೇರಿಕೆಯಲ್ಲಿ ರಾಜ್ಯದಲ್ಲಿ ಕೈಕೊಂಡ ಅತ್ಯಂತ ಪ್ರಶಂಸನೀಯ ಕಾರ್ಯಕ್ರಮಗಳೆಷ್ಟು.

ಆ) ಭಾರತ ಸರ್ಕಾರದ ಕಾರ್ಯ ಕ್ರಮ ನೆರವೇರಿಕೆ ಸಚಿವಾಲಯದ ವರದಿಯ ವಿವರಗಳೇನು ?

ಇ) ರಾಜ್ಯವು ಸಾಧನೆಯಲ್ಲಿ ಎಷ್ಟನೇ ಸ್ಥಾನವನ್ನು ಗಳಿಸಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ೨೦ ಅಂಶಗಳ ಎಲ್ಲಾ ಕಾರ್ಯಕ್ರಮಗಳನ್ನು ಸರ್ಕಾರವು ಆಪ್ಯೇ ಪ್ರಾಶಂಸನೀಯವಾಗಿ ಕೈಕೊಂಡಿದೆ. ಆದರಲ್ಲಿಯೂ ವಿಶೇಷವಾಗಿ ಹೇಳಬೇಕೆಂದರೆ, ಕುಡಿಯುವ ನೀರಿನ ಪೂರವಣೆ, ಕುಟುಂಬ ಕಲ್ಯಾಣ ಕಾರ್ಯಕ್ರಮಗಳು, ಅರಣ್ಯ ಅಭಿವೃದ್ಧಿ ಹರಿಜನ ಗಿರಿಜನ ಕಲ್ಯಾಣ ಕಾರ್ಯಕ್ರಮಗಳು, ಬಡತನ ನಿರ್ಮೂಲನಾ ಕಾರ್ಯಕ್ರಮಗಳು (Anti Poverty Programme.) ಇವುಗಳಿಗೆ ಅತೀ ಪ್ರಾಶಸ್ತ್ಯ ಕೊಡಲಾಗಿದೆ.

ಆ) ಭಾರತ ಸರ್ಕಾರದ ಕಾರ್ಯಕ್ರಮ ನೆರವೇರಿಕೆ ಸಚಿವಾಲಯವು ವರ್ಷದ ಮೊದಲಿಗೆ ಕಾರ್ಯಕ್ರಮಗಳಿಗನುಗುಣವಾಗಿ ನಿರ್ದಿಷ್ಟ ಗುರಿಗಳನ್ನು ಕೊಡುತ್ತದೆ. ಪ್ರಗತಿಯ ವರದಿಯ ಮೇರೆಗೆ ರಾಜ್ಯಗಳಿಗೆ ಸ್ಥಾನಗಳನ್ನು ಕೊಡುವರು.

ಇ) ಕಳೆದ ವರ್ಷದ ಕೊನೆಗೆ ರಾಜ್ಯವುಮೊದಲನೆಯ ಸ್ಥಾನದಲ್ಲಿತ್ತು. ಪ್ರತಿ ತಿಂಗಳು ರಾಜ್ಯವು ವಿವಿಧ ಸ್ಥಾನದಲ್ಲಿರುವುದು. ಈ ವರ್ಷದ ನವೆಂಬರ್ ತಿಂಗಳಲ್ಲಿ ಗುರಿನೇ ಸ್ಥಾನದಲ್ಲಿದೆ.

ಐ.ಟಿ.ಐ.ನ ಉಗ್ರಾಣದಲ್ಲಿ ಅವ್ಯವಹಾರ

೫೦೭. ಶ್ರೀಮತಿ ಸುಮಾವಸಂತ (ವೀರಾಜಪೇಟೆ .— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಾದ್ಯಂತ ಐ.ಟಿ.ಐ.ನ ಉಗ್ರಾಣದಲ್ಲಿ ಅವ್ಯವಹಾರ ನಡೆದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಭದ್ರಾವತಿ ಐ.ಟಿ.ಐ.ನ ಉಗ್ರಾಣದಲ್ಲಿ ನಡೆದಿರುವ ಅವ್ಯವಹಾರ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈವರೆವಿಗೆ ಕ್ರಮ ತೆಗೆದುಕೊಂಡಿಲ್ಲ ದಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ರಾಜ್ಯದಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳ ಉಗ್ರಾಣಗಳ ಪೈಕಿ ಕೈಗಾರಿಕಾ ತರಬೇತಿ ಸಂಸ್ಥೆ, ಭದ್ರಾವತಿಯಲ್ಲಿ ಅವ್ಯವಹಾರ ನಡೆದಿದ್ದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಜವಾಬ್ದಾರಿ ನಿರ್ಧರಿಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ ೧೯೫೭ರ ಪ್ರಕಾರ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.